## ಸಂಪಾದಕೀಯ

# ಶ್ರೀರಾಮಕೃಷ್ಣರ ನಿರಾಡಂಬರ ಜೀವನ

### ಜಾಹೀರಾತಿನ ಅಬ್ಬರ

ಇಂದಿನ ಯುಗವನ್ನು ಮಾಹಿತಿ ಯುಗ, ಜಾಹೀರಾತಿನ ಯುಗವೆಂದು ಕರೆಯಲಾಗುತ್ತಿದೆ. ಎಲ್ಲೆಡೆ, ವಿವಿಧ ಕ್ಷೇತ್ರಗಳಲ್ಲಿ, ಪ್ರಗತಿ ಕಂಡುಬರುತ್ತಿದೆ. ಜಗತ್ತಿನ ಜ್ಞಾನ ಭಂಡಾರ ಅಗಾಧವಾಗಿ ಬೆಳೆಯುತ್ತಿದೆ. ಸಂಶೋಧನೆಗಳ ಮಹಾಪೂರವೇ ಪ್ರತಿನಿತ್ಯವೂ ಪ್ರಕಟವಾಗುತ್ತಿದೆ. ಇಂದಿನ ಸಿದ್ಧಾಂತವನ್ನು ನಾಳೆಯ ದಿನ ತಳ್ಳಿಹಾಕಿ ಮತ್ತೊಂದು ಸಿದ್ಧಾಂತದ ಪ್ರಚಾರವಾಗುತ್ತದೆ. ಇದನ್ನೆಲ್ಲ ವಿವರವಾಗಿ ತಿಳಿಸುವುದು ಮಾಧ್ಯಮಗಳ ಕೆಲಸ. ರಂಗುರಂಗಾಗಿ ವಿವರಿಸಿ, ಓದುಗರನ್ನು ಆಕರ್ಷಿಸಿ, ತಮ್ಮ ಬಂಡವಾಳವನ್ನು ಗಿಟ್ಟಿಸಿಕೊಳ್ಳಲು ಇವರು ಹುನ್ನಾರು ನಡೆಸುತ್ತಿದ್ದರೆ ಜಾಹೀರಾತುಗಳ ಮೂಲಕ ಸ್ವಪ್ರಚಾರ ಮಾಡಿಕೊಳ್ಳಲು ಸಂಸ್ಥೆಗಳು, ವ್ಯಕ್ತಿಗಳು ಹಾತೊರೆಯುತ್ತಾರೆ.

ರಸ್ತೆಯ ಇಬ್ಬದಿಗಳಲ್ಲೂ ಕಣ್ಣಿಗೆ ರಾಚುವ ದೊಡ್ಡ ದೊಡ್ಡ ಬೋರ್ಡ್‌ಗಳು, ಅವುಗಳಲ್ಲಿ ಅಶ್ಲೀಲ ಭಂಗಿಗಳ ಪ್ರದರ್ಶನ ಹಾಗೂ ನಾನಾ ಬಗೆಯ ಪ್ರಲೋಭನೆಗಳನ್ನು ಒಡ್ಡುವ ಚಿತ್ರಗಳನ್ನು ಕಾಣುತ್ತೇವೆ. ಅನೇಕ ಬಾರಿ ರಸ್ತೆಯ ಅಪಘಾತಗಳಿಗೂ ಇವು ಕಾರಣವಾಗುತ್ತಿವೆ. ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಸೃಷ್ಟಿಸಿ, ಗ್ರಾಹಕರ ಬಯಕೆಗಳನ್ನು ಬೆಳೆಸಿ, ಪದಾರ್ಥಗಳನ್ನು ಮಾರಾಟ ಮಾಡುವುದೇ ಇಂದಿನ ಉದ್ಯಮಿಗಳ ಕಾರ್ಯವೈಖರಿ. ರಾಜಕಾರಣಿಗಳ, ಮುಖಂಡರ, ಪ್ರಸಿದ್ಧ ನಟನಟಿಯರ, ಮಹಾನ್ ವಾಗ್ಮಿಗಳ, ಸಂತರ ದೊಡ್ಡ ದೊಡ್ಡ ಚಿತ್ರಗಳು ವಸ್ತುಗಳ ಜಾಹೀರಾತುಗಳೊಂದಿಗೆ ಪೈಪೋಟಿ ನಡೆಸುತ್ತಿರುತ್ತವೆ. ಹೇಗಾದರೂ ಮಾಡಿ ವೀಕ್ಷಕರ ಗಮನವನ್ನು ಸೆಳೆದು ಪ್ರಸಿದ್ಧಿಯನ್ನು ಗಳಿಸುವುದೇ ಇವರ ಗುರಿ. ತಮ್ಮ ತಮ್ಮ ಮಾರುಕಟ್ಟೆಯನ್ನು ಭದ್ರಪಡಿಸಿಕೊಂಡು ಸದಾ ಚಲಾವಣೆಯಲ್ಲಿ ಇರಲು ಬಯಸುವ ಈ ವ್ಯಕ್ತಿಗಳು ತಮ್ಮನ್ನೇ ವಸ್ತುಗಳನ್ನಾಗಿಸಿಕೊಳ್ಳಲೂ ಹೇಸುವುದಿಲ್ಲ.

ತಿಳಿಯಾದ ಆಕಾಶವನ್ನಾದರೂ ನೋಡೋಣವೆಂದರೆ ಅಲ್ಲೂ ತೇಲುವ ಬಲೂನುಗಳಲ್ಲಿ ಜಾಹೀರಾತುಗಳನ್ನು ಹಾರಿಬಿಡುತ್ತಾರೆ. ಧ್ವನಿವರ್ಧಕಗಳ ಉಪಟಳವಂತೂ ಹೇಳತೀರದು. ದೇವಸ್ಥಾನಗಳು, ಕ್ರೀಡಾಂಗಣಗಳು, ಶಾಲೆಗಳು ಎಲ್ಲೆಲ್ಲೂ ಜಾಹೀರಾತುಗಳನ್ನು ಕಾಣಬಹುದು. ಇಂತಹ ದಾನಿಗಳು ಈ ಸೇವೆಯನ್ನು ಮಾಡಿಸುತ್ತಿರುವರು ಎಂದು ಬೋರ್ಡ್ ಬರೆಸಿ ಪ್ರದರ್ಶಿಸುವ ದೇವಸ್ಥಾನಗಳು, ಬೆಳಕನ್ನು ನೀಡುವ ದೀಪದ ಮೇಲೆ ಬಣ್ಣಬಣ್ಣಗಳಲ್ಲಿ ಹೆಸರನ್ನು ಬರೆಸುವ ದಾನಿಗಳ ಕೀರ್ತಿಯ ಹಪಹಪಿಯನ್ನು ಕಂಡು ಬೇಸರವೂ ಆಗುತ್ತದೆ.

ದಿನಪತ್ರಿಕೆಗಳಲ್ಲಿ ಸುದ್ದಿಗಿಂತ ಹೆಚ್ಚಾಗಿ ಕಂಡುಬರುವ ಜಾಹೀರಾತುಗಳಿಗಾಗಿ ಸಂಸ್ಥೆಗಳು ಅಪಾರ ಹಣವನ್ನು ಖರ್ಚು ಮಾಡುತ್ತವೆ. ಜಾಹೀರಾತಿನ ಮೂಲಕ ಪ್ರಚಾರ ಪಡೆಯುವ ವಸ್ತುಗಳು ಬಡ ಗ್ರಾಹಕರ ಕೈಗೆಟುಕದೇ ಹೋಗುತ್ತವೆ. ಬೆಳೆವ ರೈತನಿಗಿಂತಲೂ ಸುಂದರವಾಗಿ ಕಾಣುವಂತೆ ಪ್ಯಾಕ್ ಮಾಡಿ ಮಾರಾಟ ಮಾಡುವ ವ್ಯಾಪಾರಿಗಳೇ ಹೆಚ್ಚು ಗಿಟ್ಟಿಸಿಕೊಳ್ಳುತ್ತಾರೆ.



ಶ್ರೀರಾಮಕೃಷ್ಣರ ವಾತ್ಸಲ್ಯವನ್ನು ಬಿಂಬಿಸುವ ಒಂದು ಕಾಲ್ಪನಿಕ ಚಿತ್ರ

ಜಾಹೀರಾತಿನ ಮೂಲಕ ವಸ್ತುವಿನಲ್ಲಿ ಇರದ ಗುಣವನ್ನು ನಯವಾಗಿ ತಿಳಿಸಿ (ನಯವಂಚಕತನದಿಂದ), ಕಳಪೆ ಪದಾರ್ಥಗಳನ್ನೂ ಗ್ರಾಹಕರು ಕೊಂಡುಕೊಳ್ಳುವಂತೆ ಮಾಡುವಲ್ಲಿ ವ್ಯಾಪಾರಿಗಳು ಸಫಲರಾಗುತ್ತಾರೆ. ಸುಳ್ಳನ್ನೇ ಸತ್ಯವೆಂದು ಪ್ರದರ್ಶಿಸುವ ಖದೀಮತನ ಇವರದು. ದೇಶಗಳೂ ಕೂಡ ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಪದಾರ್ಥಗಳ ಹಾಗೂ ಉಪಕರಣಗಳ ವಿಶೇಷತೆಗಳನ್ನು ಪ್ರಚಾರ ಮಾಡುತ್ತವೆ. ಈ ಪ್ರಚಾರದ ಅಂಗವಾಗಿ ಯುದ್ಧಗಳನ್ನೇ ಹೂಡಿ ಶಸ್ತ್ರಾಸ್ತ್ರಗಳ ಪ್ರದರ್ಶನದಿಂದ ಅವುಗಳಿಗೆ ಬೇಡಿಕೆಗೆ ಬೇಕಾಗುವಂಥ ಮಾರು

ಕಟ್ಟೆಯನ್ನು ಸರ್ಕಾರಗಳು ಸೃಷ್ಟಿಸುತ್ತವೆ. ಭಯೋತ್ಪಾದನೆಯ ಭೀತಿಯ ಕರಾಳ ಛಾಯೆಯನ್ನು ಪೋಷಿಸಿ ಮತ್ತೆ ತಮ್ಮ ಸರಕುಗಳಿಗೆ ಎಲ್ಲೆಡೆಯಲ್ಲೂ ಬೇಡಿಕೆ ಉಂಟಾಗುವಂತೆ ಪ್ರಬಲ ರಾಷ್ಟ್ರಗಳು ಹಂಚಿಕೆ ಹೂಡುತ್ತಿರುವುದು ಇತ್ತೀಚಿನ ದಶಕಗಳಲ್ಲಿ ಹೆಚ್ಚಾಗುತ್ತಿದೆ. ಇಂತಹ ಒಂದು ವಿಷಮ ಪರಿಸ್ಥಿತಿಯನ್ನು ಜಾಹೀರಾತಿನ ಮಾಧ್ಯಮ ತಂದೊಡ್ಡಿದೆ ಎಂದು ಭಾವಿಸಿ ಅದನ್ನು ಉಪೇಕ್ಷೆ ಮಾಡಲು ಸಾಧ್ಯವೇ? ಇದು ಇಂದಿನ ಕಾಲದ ಒಂದು ಅನಿವಾರ್ಯವಾದ ಬೆಳವಣಿಗೆ.

ಈ ಜಾಹೀರಾತಿನ ಯುಗವು ಅಸಂಖ್ಯಾತ ಜನರಿಗೆ ಉದ್ಯೋಗಾವಕಾಶವನ್ನು, ಜೀವನೋಪಾಯಗಳನ್ನು ಸೃಷ್ಟಿಸಿದೆ. ಇದರಿಂದ ತಯಾರಾಗುವ ಆರೋಗ್ಯಕರ ಪೈಪೋಟಿಯಿಂದ ಗುಣಮಟ್ಟವುಳ್ಳ ಪದಾರ್ಥಗಳು ತಯಾರಾಗುತ್ತವೆ. ಸುಳ್ಳು ಮಾಹಿತಿಗಳನ್ನು ನೀಡುವ ಜಾಹೀರಾತುಗಳ ವಿರುದ್ಧ ಗ್ರಾಹಕರು ಪ್ರತಿಭಟಿಸಬಹುದು, ಕಾನೂನಿನ ಕ್ರಮ ಕೈಗೊಳ್ಳಬಹುದು. ಜಾಹೀರಾತುಗಳನ್ನು ಸೃಷ್ಟಿಸುವ ಕಲೆ ಒಂದು ಜ್ಞಾನದ ಶಾಖೆಯಾಗಿ ಬೆಳೆದು ಅನೇಕ ಯುವಕ-ಯುವತಿಯರು ಇದರಲ್ಲಿ ತರಬೇತಿ ಪಡೆದು ಒಳ್ಳೆಯ ಹುದ್ದೆಗಳನ್ನು ಪಡೆಯುತ್ತಿದ್ದಾರೆ. ಕಂಪ್ಯೂಟರ್‌ಗಳ ಪ್ರಭಾವದಿಂದ ಜಾಹಿರಾತಿನ ಜಗತ್ತು ಮತ್ತಷ್ಟು ಪ್ರಬಲವಾಗಿದೆ. ವೆಬ್‌ಸೈಟ್ ಹಾಗೂ ಇಂಟರ್‌ನೆಟ್‌ಗಳ ಮೂಲಕ ಮಾಹಿತಿಯ ಆಂದೋಲನವೇ ನಡೆದಿದೆ. ಸರಿಯಾಗಿ ಬಳಸಿದರೆ ಈ ಜಾಹೀರಾತಿನ ಮೂಲಕ ಬಹಳಷ್ಟು ರಚನಾತ್ಮಕ ಕಾರ್ಯಗಳನ್ನು ನೆರವೇರಿಸುವ ಸಾಧ್ಯತೆಯಿದೆ. ಅಂತೆಯೇ ಒಂದು ವಸ್ತುವನ್ನಾಗಲಿ, ವ್ಯಕ್ತಿಯನ್ನಾಗಲಿ ಜಾಹೀರಾತು ಬೆಳೆಸಲೂಬಹುದು, ಬೀಳಿಸಲೂಬಹುದು. ಅಪಪ್ರಚಾರದ ಮೂಲಕ ಮಾನಹಾನಿ ಮಾಡುವ ಅನೇಕ ಪ್ರಸಂಗಗಳೂ ಇವೆ. ಏನೇ ಆಗಲಿ, ಸಾಮಾನ್ಯವಾಗಿ ಜಾಹೀರಾತು ಇದ್ದದ್ದನ್ನು ಇದ್ದಂತೆ ಹೇಳದೆ, ಸುಳ್ಳಿನ ಒಂದು ಸರಣಿಯನ್ನೇ ಹೊರಡಿಸುತ್ತದೆ.

ಒಬ್ಬ ವ್ಯಕ್ತಿಯು ತನ್ನ ಸಾಧನೆಯನ್ನು ಪ್ರಚಾರ ಮಾಡಬೇಕೇ, ಅದಕ್ಕೆ ಜಾಹೀರಾತು ನೀಡಬೇಕೆ? ತನ್ಮೂಲಕ ಮತ್ತಷ್ಟು ಹೆಸರನ್ನು ಗಳಿಸಬೇಕೆ? ಶ್ರೀರಾಮಕೃಷ್ಣರು ಈ ಬಗ್ಗೆ ಏನು ಹೇಳಿದ್ದಾರೆ? ಅವರ ನಿಲುವು ಏನು ಎಂಬುದನ್ನು ಪರಿಶೀಲಿಸೋಣ.

ಸತ್ಯದೊಂದಿಗೆ ಒಂದಿನಿತೂ ರಾಜಿಮಾಡಿಕೊಳ್ಳದೆ ಅದನ್ನೇ ತಮ್ಮ ಜೀವನದ ಆಸರೆಯಾಗಿಸಿಕೊಂಡಿದ್ದ ಶ್ರೀರಾಮಕೃಷ್ಣರಿಗೆ ಸುಳ್ಳನ್ನೇ ವರದಿ ಮಾಡುವ ವೃತ್ತಪತ್ರಿಕೆಗಳನ್ನು ಕಂಡರೆ ಆಗುತ್ತಿರಲಿಲ್ಲ. ಅವುಗಳಲ್ಲಿನ ಮಾಹಿತಿ ಸಂಪೂರ್ಣ ವಿಶ್ವಾಸಾರ್ಹವಲ್ಲ ಎಂದೇ ಅವರು ಹೇಳುತ್ತಿದ್ದರು. ತಮ್ಮ ಬಳಿಗೆ ಬರುವವರು ಪತ್ರಿಕೆಗಳನ್ನು ತಂದರೆ ಅವರು ಆ ಸ್ಥಳಕ್ಕೆ ಗಂಗಾಜಲವನ್ನು ಪ್ರೋಕ್ಷಿಸಿ ಶುದ್ಧಗೊಳಿಸುತ್ತಿದ್ದರು. ಅವರು ಒಂದು ಉದಾಹರಣೆಯನ್ನು ಕೊಟ್ಟು, ಇಂದಿನ ಪೀಳಿಗೆಯವರು ಹೇಗೆ ವೃತ್ತಪತ್ರಿಕೆಗಳ ದಾಸರಾಗಿದ್ದಾರೆ ಎಂಬುದನ್ನು ನಿರೂಪಿಸುತ್ತಿದ್ದರು. ಇಬ್ಬರು ಸ್ನೇಹಿತರಿದ್ದರು. ಒಂದು ದಿನ ಭೇಟಿಯಾದಾಗ ಅವರಲ್ಲೊಬ್ಬ ದಾರಿಯಲ್ಲಿ ಬರುವಾಗ ಒಂದು ಮನೆ ಸುಟ್ಟುಹೋಗುತ್ತಿರುವುದನ್ನು ತಾನು ಕಂಡೆನೆಂದು ತಿಳಿಸಿದ. ಇದನ್ನು ಕೇಳಿಸಿಕೊಂಡ ಸ್ನೇಹಿತ ಮನೆಯೊಳಗೆ ಹೋಗಿ ವೃತ್ತಪತ್ರಿಕೆಯಲ್ಲಿ ಅದು ವರದಿಯಾಗಿದೆಯೇ ಎಂದು ಪರಿಶೀಲಿಸಿದ. ಅಲ್ಲಿ ಅದು ಪ್ರಕಟವಾಗಿರಲಿಲ್ಲ. ಈತ ತನ್ನ ಸ್ನೇಹಿತನಿಗೆ ಹೇಳಿದ, “ಅಯ್ಯಾ! ನೀನು ಹೇಳಿದ ಮನೆಯ ವಿಷಯ ಪತ್ರಿಕೆಯಲ್ಲಿ ಬಂದಿಲ್ಲ. ಆದ್ದರಿಂದ ನಾನು ಅದನ್ನು ನಂಬಲಾರೆ!”

**ಕೀರ್ತಿಯ ವ್ಯಾಮೋಹವಿಲ್ಲ**

ಆಧ್ಯಾತ್ಮಿಕ ಸಾಧನೆಯಲ್ಲೇ ಸದಾ ತೊಡಗಿದ್ದ ಶ್ರೀರಾಮಕೃಷ್ಣರಿಗೆ ಹೆಸರು-ಕೀರ್ತಿಗಳನ್ನು ಗಳಿಸುವ ಮಾಧ್ಯಮಗಳನ್ನು ಕಂಡರೆ ಅಸಡ್ಡೆ. ಅದು ವ್ಯಕ್ತಿಯ ಸಾಧನೆಗೆ ಮಾರಕವೆಂದೇ ಅವರು ಹೇಳುತ್ತಿದ್ದರು. ವ್ಯಕ್ತಿಯ ಚಾರಿತ್ರ್ಯವು ಪರಿಶುದ್ಧವಾದರೆ, ಅವನಲ್ಲಿ ಗುಣಗಳು ಚೆನ್ನಾಗಿ ನೆಲೆನಿಂತು ಇತರರಿಗೆ ಮಾರ್ಗದರ್ಶನ ನೀಡುವ ಸಾಮರ್ಥ್ಯ ಅವನಲ್ಲಿ ಜಾಗೃತವಾದರೆ, ಆಗ ಪ್ರಚಾರದ ಆವಶ್ಯಕತೆಯಿರುವುದಿಲ್ಲ. ಹೂವುಗಳು ಅರಳಿದಾಗ ದುಂಬಿಗಳು ಆ ಪರಿಮಳದಿಂದ, ಬಣ್ಣಗಳಿಂದ ಆಕರ್ಷಿತಗೊಂಡು ಅದರತ್ತ ಬರುವಂತೆ ವ್ಯಕ್ತಿಯ ಚಾರಿತ್ರ್ಯ ಶುದ್ಧವಾಗಿದ್ದರೆ ಜನ ತಾವಾಗಿಯೇ ಆಕರ್ಷಿತರಾಗುತ್ತಾರೆ.

ಶ್ರೀರಾಮಕೃಷ್ಣರು ಸ್ವತಃ ಎಂದೂ ಪ್ರಚಾರವನ್ನು ಬಯಸಿದವರಲ್ಲ. ಬಹು ದೊಡ್ಡ ವಾಗ್ಮಿಯೆಂದೇ ಪ್ರಸಿದ್ಧರಾಗಿದ್ದ ಸರ್ ಕೇಶವಚಂದ್ರ ಸೇನ್ ಇವರ ಅದ್ಭುತ ಜೀವನ-ಸಾಧನೆಗಳನ್ನು ಕುರಿತು ಬರೆಯಲು ಪ್ರಾರಂಭಿಸಿದಾಗ ಶ್ರೀರಾಮಕೃಷ್ಣರು ಬೇಸರ ವ್ಯಕ್ತಪಡಿಸಿದರು. ಭಕ್ತನಾದ ಶ್ರೀ ರಾಮಚಂದ್ರ ದತ್ತ ಇವರ ಬಗ್ಗೆ ಪುಸ್ತಕವನ್ನು ಬರೆದು ಪ್ರಚಾರ ಮಾಡಬಯಸಿದಾಗ ಶ್ರೀರಾಮಕೃಷ್ಣರು ಅವನನ್ನು ತಡೆದರು. ಪ್ರಸಿದ್ಧ ವ್ಯಕ್ತಿಗಳ ಬಗ್ಗೆ ಬರೆಯುವುದು ಕೆಲವರ ಹವ್ಯಾಸ. ತನ್ಮೂಲಕ ಹೆಸರು ಗಳಿಸಲು ಪ್ರಯತ್ನಿಸುವವರೂ ಕೆಲವರು ಇರುತ್ತಾರೆ. ಶ್ರೀರಾಮಕೃಷ್ಣರು ತಮ್ಮ ಬಗ್ಗೆ ಪ್ರಚಾರ ಮಾಡುತ್ತಿರುವವರನ್ನು ಪ್ರಶ್ನಿಸುತ್ತಿದ್ದರು: “ನೀನು ಇದರ (ತಮ್ಮನ್ನು ಕುರಿತು ಅವರು ಸಂಬೋಧಿಸುತ್ತಿದ್ದುದು ಹೀಗೆ) ಬಗ್ಗೆ ಏನೇನೋ ಹೇಳುತ್ತಿದ್ದೀಯಲ್ಲ. ಏನನ್ನು ಕಂಡಿರುವೆ? ಇಲ್ಲಿನ ಯಾವ ವಿಚಾರ ನಿನಗೆ ತಿಳಿದಿದೆ?” ಈ ರೀತಿಯಾಗಿ ಅವರ ಗ್ರಹಿಕೆಯ ಸಾಮರ್ಥ್ಯವನ್ನು ಪರೀಕ್ಷಿಸುತ್ತಿದ್ದರು. “ನಾನು ಹಾಗೆ ಹೇಳಲಿಲ್ಲ. ನಾನು ಹೇಳಿದ್ದು ಈ ರೀತಿಯಾಗಿ. ಇದರ ಉದ್ದೇಶ ಹೀಗಿದೆ” ಎಂದು ಅವರಿಗೆ ಮತ್ತೆ ವಿವರಿಸಿ ತಿಳಿಸುತ್ತಿದ್ದರು. ಇಲ್ಲಸಲ್ಲದ ವಿಚಾರಗಳನ್ನು ತಮ್ಮ ಬಗ್ಗೆ ಪ್ರಚಾರ ಮಾಡುವುದು ಶ್ರೀರಾಮಕೃಷ್ಣರಿಗೆ

ಇಷ್ಟಪಡಲಿಲ್ಲ. ಹಾಗೆ ಮಾಡುವುದರಿಂದ ಸುಳ್ಳಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ ಎಂದು ಅಂತಹ ಪ್ರಯತ್ನಗಳಿಗೆ ಅವರು ಕಡಿವಾಣ ಹಾಕುತ್ತಿದ್ದರು.

ಸಾಮಾನ್ಯವಾಗಿ ಸಂತರ, ಮಹಾತ್ಮರ ಜೀವನಗಳನ್ನು ದಾಖಲಿಸುವವರು ಅತೀಂದ್ರಿಯ ವಿಚಾರಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಾರೆ. ಅವುಗಳನ್ನು ಬಣ್ಣಿಸಿ ಹೇಳುತ್ತ ವ್ಯಕ್ತಿಯ ಮಹಿಮೆಗೆ ಈ ಪವಾಡಗಳೇ ಸಾಕ್ಷಿಯೆನ್ನುವಂತೆ ಚಿತ್ರಿಸುತ್ತಾರೆ. ಶ್ರೀರಾಮಕೃಷ್ಣರು ಯಾವುದೇ ಪವಾಡವನ್ನು ಪ್ರದರ್ಶಿಸಲಿಲ್ಲ. ಪವಾಡಗಳನ್ನು ಅತ್ಯಂತ ತಿರಸ್ಕಾರದಿಂದ ಕಾಣುತ್ತಿದ್ದರು. ತಮ್ಮ ಬಳಿಗೆ ಬಂದ ವ್ಯಕ್ತಿಗಳಿಗೆ ತಮ್ಮ ಆಧ್ಯಾತ್ಮಿಕ ಅನುಭವಗಳನ್ನು ತಿಳಿಸುತ್ತ, ತನ್ಮೂಲಕ ಭಗವಂತನಲ್ಲಿ ವ್ಯಾಕುಲತೆ, ವಿಷಯಾಸಕ್ತಿಗಳಲ್ಲಿ ವೈರಾಗ್ಯವನ್ನು ಅವರಲ್ಲಿ ರೂಢಿಸಲು ಪ್ರಯತ್ನಿಸುತ್ತಿದ್ದರು. ಆದರೆ ಎಷ್ಟೂ ಎಂದೂ ಪ್ರಲೋಭನೆಗಳನ್ನಾಗಲಿ, ಒತ್ತಾಯವನ್ನಾಗಲಿ ಅವರು ಬೋಧನೆಯ ಮಾಧ್ಯಮವಾಗಿ ಬಳಸಲಿಲ್ಲ. ತಮ್ಮ ಬಳಿಗೆ ಬಂದವರ ಭಾವಕ್ಕೆ ತಕ್ಕಂತೆ ಸ್ಪಂದಿಸುವ ಮನೋವೈಶಾಲ್ಯತೆ ಅವರಲ್ಲಿತ್ತು. ಇತರರ ಮೆಚ್ಚುಗೆಯನ್ನು ಬಯಸಿ, ತನ್ಮೂಲಕ ಸಾರ್ಥಕ್ಯವನ್ನು ಪಡೆಯುವ ಅಲ್ಪತನ ಅವರಲ್ಲಿ ಇರಲಿಲ್ಲ. ಆದಕ್ಕಾಗಿಯೇ ಅವರು ಯಾವುದೇ ಪ್ರಚಾರವನ್ನು ಬಯಸಲಿಲ್ಲ.

ಒಂದು ಸಿಹಿತಿಂಡಿಯನ್ನು ಎಲ್ಲೇ ಬಚ್ಚಿಟ್ಟರೂ ಅಲ್ಲಿಗೆ ಇರುವೆಗಳು ಹೇಗೋ ಬಂದುಬಿಡುತ್ತವೆ. ಅಂತೆಯೇ ಶ್ರೀರಾಮಕೃಷ್ಣರ ವ್ಯಕ್ತಿತ್ವದ ಆಕರ್ಷಣೆಗೆ ಒಳಗಾಗಿ ಬಂದವರನೇಕರು. "ಮತ್ತೆ ಬಾ" ಎನ್ನುತ್ತಿದ್ದ ಅವರ ಸವಿದನಿಯನ್ನು ಕೇಳಿದಾಕ್ಷಣ ಪುನಃ ಇಲ್ಲಿಗೆ ಬಂದು, ಇವರನ್ನು ಕಾಣಬೇಕು ಎಂಬ ತವಕ ಆ ಶಿಷ್ಯರಲ್ಲಿ, ಭಕ್ತರಲ್ಲಿ ಜಾಗೃತವಾಗುತ್ತಿತ್ತು. ಒಂದು ಅಯಸ್ಕಾಂತವು ಕಬ್ಬಿಣದ ಅಂಶವಿರುವ ವಸ್ತುಗಳನ್ನು ತನ್ನತ್ತ ಸೆಳೆಯುವಂತೆ ಈ ಆಕರ್ಷಣೆ ಪ್ರಬಲವೂ, ಮಧುರವೂ ಆಗಿತ್ತು. ಶ್ರೀರಾಮಕೃಷ್ಣರ ಅದ್ಭುತ ಜೀವನ ಹಾಗೂ ತ್ಯಾಗಗಳಿಂದ ಆಕರ್ಷಿತರಾಗುತ್ತಿದ್ದ ಭಕ್ತರು ಆ ಶಾಂತಿಯ ಮಡಿಲಲ್ಲಿ ಬಂದು ತಮ್ಮ ಚಿಂತೆಯನ್ನು ಮರೆಯುತ್ತಿದ್ದರು, ಆಧ್ಯಾತ್ಮಿಕತೆಯ ಸಮಗ್ರ ದೃಷ್ಟಿಯನ್ನು ಪಡೆಯುತ್ತಿದ್ದರು. ಪ್ರಸಿದ್ಧ ವ್ಯಕ್ತಿಗಳು ಇಲ್ಲಿ ಬಂದು ಸೇರುತ್ತಾರೆ, ಅವರ ಸಹವಾಸದಿಂದ ನಾವೂ ಏನಾದರೂ ಪಡೆಯಬಹುದು ಎಂಬ ಲೌಕಿಕ ಆಸೆಯಿದ್ದವರೂ ಬರುತ್ತಿದ್ದರು. ಆದರೆ ಇವರನ್ನು ಶ್ರೀರಾಮಕೃಷ್ಣರು ತಮ್ಮ ಪ್ರಭಾವ ವಲಯದೊಳಗೆ ಸೆಳೆದುಕೊಂಡುಬಿಡುತ್ತಿದ್ದರು. ಸ್ಪರ್ಶಮಣಿಯು ಲೋಹವನ್ನು ಚಿನ್ನವಾಗಿ ಪರಿವರ್ತಿಸುವಂತೆ ಇವರ ವ್ಯಕ್ತಿತ್ವದ ಪರಿಚಯವಾದವರೆಲ್ಲರೂ ತಮ್ಮ ಜೀವನದಲ್ಲಿ ಹೊಸ ಬೆಳಕನ್ನು ಕಂಡುಕೊಂಡರು. ಆದರೆ ತಮ್ಮ ಬಳಿಗೆ ಎಷ್ಟು ಜನ ಬರುತ್ತಿದ್ದಾರೆ, ಅವರು ಎಂತಹವರು, ಹಣವಂತರೆ, ಪ್ರಸಿದ್ಧರೆ ಎಂಬ ಯಾವ ವಿಚಾರಗಳ ಬಗ್ಗೆಯೂ ಶ್ರೀರಾಮಕೃಷ್ಣರು ಎಂದೂ ತಲೆ ಕೆಡಿಸಿಕೊಳ್ಳಲಿಲ್ಲ. ಇಂತಿಂತಹ ಪ್ರಸಿದ್ಧ ವ್ಯಕ್ತಿಗಳು ನನ್ನ ಬಳಿ ಬರುತ್ತಿರುವರು ಎಂದು ಯಾರ ಮುಂದೆಯೂ ಜಂಬ ಕೊಚ್ಚಿಕೊಳ್ಳಲಿಲ್ಲ.

ಶ್ರೀರಾಮಕೃಷ್ಣರು ಇಂತಹ ಒಂದು ಮನಃಸ್ಥಿತಿಯನ್ನು ತಮ್ಮ ಸಹಜ ಗುಣವಾಗಿ ಹೊಂದಿದ್ದರು. ಎಲ್ಲವನ್ನೂ ಸರಿಯಾಗಿ ಸ್ವೀಕರಿಸುವ ಶಾಂತ, ಧೀರ ದೃಷ್ಟಿ ಅವರಿಗಿತ್ತು. ಆದ್ದರಿಂದಲೇ ಅವರು ಯಾರನ್ನೂ, ಯಾವ ಭಾವನೆಯನ್ನೂ ತಿರಸ್ಕರಿಸಲಿಲ್ಲ. ತಮ್ಮ ವಿಚಾರಗಳೇ ಸರಿಯೆಂದು ಪ್ರಚಾರ ಮಾಡಿ ಯಶಸ್ಸಿನ ಗೀಳಿಗೆ ಮರುಳಾಗಲಿಲ್ಲ.

ಕೇವಲ ಒಂದು ಶತಮಾನದ ಹಿಂದೆ ಜೀವಿಸಿದ್ದ ಶ್ರೀರಾಮಕೃಷ್ಣರು ಇಂತಹ ನಿರಾಡಂಬರ ಜೀವನವನ್ನು ತಮ್ಮದಾಗಿಸಿಕೊಂಡು ನಮ್ಮ ಮುಂದೆ ಒಂದು ಮಹದಾದರ್ಶವನ್ನೇ ಇರಿಸಿದ್ದಾರೆ. ಆಧುನಿಕತೆಯ ಹೆಸರಿನಲ್ಲಿ ಹಳಿ ತಪ್ಪುತ್ತಿರುವ ಸಮಾಜಕ್ಕೆ ಕಡಿವಾಣ ಹಾಕಿ ನಿಲ್ಲಿಸಬೇಕಾದರೆ ಆಯಾ ಸಮಾಜದಲ್ಲಿರುವ ಉತ್ತಮ ವಿಚಾರಗಳಿಗೆ ಪ್ರಚಾರ ದೊರೆಯಬೇಕು. ತಮ್ಮ ಜೀವನದಲ್ಲಿ ಯಾವುದಾದರೂ ಒಂದು ಮೌಲ್ಯವನ್ನು ಸಾಧಿಸಿರುವ ವ್ಯಕ್ತಿಗಳ ಚಿತ್ರಣವನ್ನು, ಸಾಧನೆಯನ್ನು ಪತ್ರಿಕೆಗಳು ವರದಿ ಮಾಡಬೇಕು. ಹಣ ಗಳಿಸುವುದು ಮಾತ್ರ ಮಾನವನ ಉದ್ದೇಶವಾದರೆ ಶೀಘ್ರದಲ್ಲಿಯೇ ಸಮಾಜದಿಂದ ಮಾನವೀಯತೆ ಕಣ್ಮರೆಯಾಗುವ ಸಾಧ್ಯತೆಯಿದೆ. ಈ ವಿವೇಚನೆಯನ್ನು ಶ್ರೀರಾಮಕೃಷ್ಣರ ಜೀವನ ನಮಗೆ ಒದಗಿಸುತ್ತದೆ. ಅದನ್ನು ಸ್ವೀಕರಿಸಿ ಶಾಶ್ವತವಾದ ಸಂಸ್ಕೃತಿ, ಮೌಲ್ಯಗಳನ್ನು ಮುಂದಿನ ಪೀಳಿಗೆಗಳಿಗೆ ವರ್ಗಾಯಿಸುವ ಉತ್ತಮ ಪ್ರಜೆಗಳಾಗೋಣ.

## ಆಶ್ರಮದ ವಿಶೇಷ ಉತ್ಸವದ ದಿನಗಳು

ಫೆಬ್ರವರಿ ೨೦೦೭

| | | |
|---|---|---|
| ಸ್ವಾಮಿ ಅದ್ಭುತಾನಂದ ಜಯಂತಿ | ಶುಕ್ರವಾರ | ೦೨ |
| ಏಕಾದಶಿ | ಮಂಗಳವಾರ | ೧೩ |
| ಮಹಾಶಿವರಾತ್ರಿ | ಶುಕ್ರವಾರ | ೧೬ |
| ಶ್ರೀರಾಮಕೃಷ್ಣ ಜಯಂತಿ | ಸೋಮವಾರ | ೧೯ |
| ಏಕಾದಶಿ | ಮಂಗಳವಾರ | ೨೭ |

ಫೆಬ್ರವರಿ ೨೦ರಿಂದ ೨೬ ರವರೆಗೆ ಆಶ್ರಮದ ವಾರ್ಷಿಕೋತ್ಸವ ಸಮಾರಂಭಗಳು ಜರುಗುತ್ತವೆ.